ದಿಲ್‌ಖುಷ್ ಪಾನ್‌ಶಾಪ್‌ನ ಚಂದ್ರು ಅಲಿಯಾಸ್ ಚಂದ್ರಾಮಲಿಂಗ ಎಂಬ ಹರೆಯದ ಹುಡುಗ ಶಾಂತವೀರಪ್ಪಗೌಡರ ಮಗಳು ವೈಜಯಂತಿಗೆ ರಕ್ತದಲ್ಲಿ ಪ್ರೇಮಪತ್ರ ಬರೆದು ಕೊಟ್ಟನೆಂಬ ಸುದ್ದಿ ಕಾಡ್ಗಿಚ್ಚಿನಂತೆ ಊರಿನ ಸಂದಿಗೊಂದಿಗಳನ್ನು ಹಾಯ್ದು ಪ್ರತಿ ಮನೆಯನ್ನು ತಲುಪಿ ಊರ ಜನರು ಕುಳಿತಲ್ಲಿ ನಿಂತಲ್ಲಿ ಚರ್ಚಿಸಲು ಗ್ರಾಸವಾಯಿತು. ಗೌಡರನ್ನು ಎದುರು ಹಾಕಿಕೊಂಡ ಹುಡುಗನಿಗೆ ಇನ್ನೇನು ಗ್ರಹಚಾರ ಕಾದಿದೆಯೊ ಎಂದು ಕೆಲವರು ಆತಂಕಕ್ಕೊಳಗಾದರೆ, ಇನ್ನು ಕೆಲವರು ಹುಡುಗನ ಧೈರ್ಯ ಮೆಚ್ಚಿ ಶಾಂತವೀರಪ್ಪಗೌಡರಿಗೆ ತಕ್ಕ ಶಾಸ್ತಿಯಾಯಿತೆಂದು ಮನಸ್ಸಿನಲ್ಲೇ ಹಿರಿಹಿರಿ ಹಿಗ್ಗಿದರು. ಊರಿನ ಪಡ್ಡೆ ಹೈದರು ಚಂದ್ರುಗೆ ದೊರೆತ ಭಾಗ್ಯ ತಮಗಿಲ್ಲವಲ್ಲ ಎಂದು ಮಮ್ಮಲ ಮರುಗಿದವು. ರಾತ್ರಿ ಕಳೆದು ಬೆಳಗಾಗುವಷ್ಟರಲ್ಲಿ ಚಂದ್ರು ಏಕಕಾಲಕ್ಕೆ ಊರ ಜನರ ಮೆಚ್ಚುಗೆಗೂ ಮತ್ತು ಅಸೂಯೆಗೂ ಪಾತ್ರನಾಗುವ ಸನ್ನಿವೇಶವೊಂದು ರಕ್ತರಂಜಿತ ಪ್ರೇಮಪತ್ರದಿಂದ ನಿರ್ಮಾಣವಾಗಿತ್ತು.

ಜಿಲ್ಲಾಕೇಂದ್ರ ಕಲಬುರಗಿಯಿಂದ ಕೇವಲ ಹತ್ತು ಕಿಲೋ ಮೀಟರ್‌ಗಳ ಅಂತರದಲ್ಲಿರುವ ವಾಡ್ಯಾ ಎನ್ನುವ ಕುಗ್ರಾಮ ನಮ್ಮ ಕಥಾನಾಯಕ ಚಂದ್ರುನ ಜನ್ಮಭೂಮಿ ಮತ್ತು ಕರ್ಮಭೂಮಿ ಎರಡೂ ಆಗಿತ್ತು. ಜಿಲ್ಲಾಕೇಂದ್ರಕ್ಕೆ ಹತ್ತಿರದಲ್ಲಿದ್ದರೂ ಮುಖ್ಯಪಟ್ಟಣಗಳ ಹೆದ್ದಾರಿಗಳಿಗೆ ಹೊಂದಿಕೊಂಡಿಲ್ಲದ ಕಾರಣ ಊರು ಸ್ವಾತಂತ್ರ್ಯ ಸಿಕ್ಕು ಇಷ್ಟು ವರ್ಷಗಳಾದರೂ ಯಾವ ಅಭಿವೃದ್ಧಿಯನ್ನೂ ಕಾಣದೆ ನೋಡುಗರ ಕಣ್ಣಿಗೆ ಪುರಾತನ ಕಾಲದ ಪಳಿಯುಳಿಕೆಯಂತೆ ಗೋಚರಿಸುತ್ತಿತ್ತು.

ಇಂಥ ಕುಗ್ರಾಮದಲ್ಲಿ ಪಿತ್ರಾರ್ಜಿತವಾಗಿ ಬಂದ ಐದೆಕರೆ ಹೊಲದಲ್ಲಿ ವ್ಯವಸಾಯ ಮಾಡಿಕೊಂಡು ಬದುಕಿನ ಬಂಡಿ ಎಳೆಯುತ್ತಿದ್ದ ಕುಬೇರಲಿಂಗನೆಂಬ

